AstraZeneca

# AstraZeneca Pharma India Limited

(CIN: L24231KA1979PLC003563)
Regd. Office: Block N1, 12th Floor, Manyata Embassy Business Park, Rachenahalli, Outer Ring Road, Bangalore - 560 045
Email: comp.secy@astrazeneca.com, Web: www.astrazeneca.com/india
Tel: +91 80 67748000, Fax: +91 80 6774 8557

## NOTICE OF ANNUAL GENERAL MEETING AND E-VOTING INFORMATION

NOTICE is hereby given that the 44th Annual General Meeting ("AGM") of the Members of AstraZeneca Pharma India Limited ("the Company") will be held on Monday, August 14, 2023 at 3.00 p.m. (IST) through Video Conferencing ('VC')/ Other Audio Visual Means ('OAVM') in accordance with the applicable provisions of the Companies Act, 2013 ('the Act'), Circular(s) issued by the Ministry of Corporate Affairs dated May 5, 2020 read with circulars April 8, 2020, April 13, 2020, January 13, 2021, December 14, 2021, May 5, 2022 and December 28, 2022 (the "MCA Circulars") and circular dated May 12, 2020, January 15, 2021 and May 13, 2022 issued by the Securities and Exchange Board of India (SEBI), to transact the business as set out in the Notice dated May 30, 2023 which will be e-mailed to the Members, separately.

In compliance with the Act, the Rules made thereunder and the above Circulars, electronic copies of the Notice of AGM and the Annual Report 2022-23 will be sent to those Members whose email addresses are registered with the Company's Registrar and Share Transfer Agents/Depository Participant(s). The Annual Report for the financial year 2022-23 including the Notice of AGM shall also be made available on the Company's website at www.astrazeneca.com/india, websites of Stock Exchanges i.e., www.nseindia.com/ www.bseindia.com and on the website of National Securities Depository Limited (NSDL) at https://www.evoting.nsdl.com.

**The Members may note the following:**

a. Members will be provided with the facility to cast their votes on all resolutions set forth in the Notice of AGM using electronic Voting system (e-voting) facility provided by NSDL. The manner of voting remotely by the Members holding shares in electronic mode and physical mode and for Members who have not registered their email addresses will be provided in the Notice of AGM.

b. The e-voting period commences on August 10, 2023 (9.00 a.m. IST) and ends on August 13, 2023 (5.00 p.m. IST). During this period, Members may cast their votes electronically. The e-voting module shall be disabled by NSDL thereafter. The voting rights of Members shall be in proportion to the equity shares held by them in the paid-up equity share capital of the Company as on August 7, 2023 ('cut-off date'). Any person, who is a Member of the Company holding shares either in dematerialized form or physical form as on the cut-off date is eligible to cast votes on all the resolutions set forth in the Notice of AGM, using remote e-voting.

c. Those Members, who will be present in the AGM through VC / OAVM facility and have not cast their vote on the Resolutions through remote e-voting and are otherwise not barred from doing so, shall be eligible to vote through remote e-voting system during the AGM.

d. Members who have cast their votes by remote e-voting prior to AGM may also attend/ participate in the AGM through VC / OAVM but shall not be entitled to cast their votes again.

Members whose email addresses are not registered, but Mobile numbers are available, SMS are being sent to Members by Integrated Registry Management Services Private Limited containing the weblink for downloading the Notice. Please treat this Notice as our attempt to reach all our Members who have missed or not received other communication on this subject matter and intend to participate in proposed remote e-voting.

Members who have not registered their email address and in consequence could not receive the Notice may get their email address registered with the RTA, through the link: https://www.integratedindia.in/emailupdation.aspx and following the registration process as guided thereafter. Post successful registration of the email address, the Member will receive soft copy of the Notice and the procedure for remote e-voting along with the User ID and the Password to enable remote e-voting for this Notice. In case of any queries, Member may write to giri@integratedindia.in. Otherwise, Members are requested to send a request / communication till 48 hours prior to the closure of the voting period to the following email address of the Company or RTA, by quoting the Folio No. / Demat account No. The email address of the Company and the contact details are comp.secy@astrazeneca.com/ 080 67748000 and RTA's email address and the contact details are giri@integratedindia.in / 080 23460815-18.

Members are also requested to register their email address, in respect of electronic holdings with the Depositories / Depository Participant and in respect of physical holdings with the RTA.

Any person, who acquires shares of the Company and become a Member of the Company after dispatch of the Notice and holding shares as on the cut-off date i.e. August 7, 2023, may obtain the login ID and password by sending a request to evoting@nsdl.co.in or giri@integratedindia.in. However, if you are already registered with NSDL for remote e-voting, then you can use your existing user ID and password for casting your votes.

The Board of Directors of the Company has appointed Mr. Vijayakrishna K.T, Practising Company Secretary, Bangalore, C.P. No. 980, Membership No. FCS: 1788, as the Scrutinizer for conducting the e-voting process, in a fair and transparent manner.

Persons entitled to attend and vote at the meeting, may vote in person / authorised representative, provided that all the prescribed form/authorisation duly signed by the person entitled to attend and vote at the meeting, are mailed to the scrutinizer through e-mail on vijaykt@vjkt.in with a copy marked to evoting@nsdl.co.in.

In case of any queries relating to voting by electronic means, you may refer to the Frequently Asked Questions (FAQs) and e-voting user manual for Members available at the Downloads sections of www.evoting.nsdl.com or contact NSDL at Toll Free No.: 022 - 4886 7000 and 022 - 2499 7000 or send a request at evoting@nsdl.co.in. In case of any grievances connected with the facility for voting by electronic means, the same may be addressed to Mr. Soni Singh, Assistant Manager and Ms. Sarita Mote, Assistant Manager, NSDL, 4th Floor, Kamala Mills Compound, Senapati Bapat Marg, Lower Parel, Mumbai – 400 013 at 022 - 4886 7000/022 - 2499 7000/ evoting@nsdl.co.in or write to the Company at comp.secy@astrazeneca.com.

The record date for the purpose of determining the entitlement of Members for the final dividend for the financial year 2022-23 was Friday, July 14, 2023. The payment of dividend shall be made within stipulated timelines, subject to the approval of Members at the 44th AGM. Members may note that as per the Income Tax Act, 1961, dividend income is taxable in the hands of Members, and the Company is required to deduct tax at source (TDS) from dividend paid to the Members at rates prescribed in the Income Tax Act, 1961. Members are requested to submit the documents in accordance with the provisions of the Income Tax Act, 1961 at https://www.integratedindia.in/ExemptionFormSubmission.aspx Kindly refer to the Company's e-mail communication dated July 17, 2023 in this regard which is also uploaded at www.nseindia.com and www.bseindia.com.

**For AstraZeneca Pharma India Limited**

Place: **Bengaluru**
Date: **July 20, 2023**

**Manasa. R**
**Company Secretary**

AstraZeneca

**ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್**

(CIN: L24231KA1979PLC003563)

ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045

ಇಮೇಲ್: comp.secy@astrazeneca.com ವೆಬ್: www.astrazeneca.com/india

ದೂರವಾಣಿ: +91 80 67748000, ಫ್ಯಾಕ್ಸ್: +91 80 6774 8557

# ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆ ಮತ್ತು ಇ-ಮತದಾನದ ಬಗ್ಗೆ ಮಾಹಿತಿ

ಸದಸ್ಯರಿಗೆ ಪ್ರತ್ಯೇಕವಾಗಿ ಇಮೇಲ್ ಮೂಲಕ ಕಳುಹಿಸಿಕೊಡಲಾಗುವ ಮೇ 30, 2023ರ ಸೂಚನೆಯಲ್ಲಿ ತಿಳಿಸಲಾಗಿರುವಂತಹ ವ್ಯವಹಾರವನ್ನು ನಡೆಸುವ ಸಲುವಾಗಿ ಆಸ್ಟ್ರಾಜೆನಿಕ ಫಾರ್ಮ ಇಂಡಿಯಾ ಲಿಮಿಟೆಡ್‌ನ ("ಕಂಪನಿ") 44ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ("ಎಜಿಎಮ್") ಸೋಮವಾರ, ಆಗಸ್ಟ್ 14, 2023ರಂದು ಮಧ್ಯಾಹ್ನ 03.00 ಗಂಟೆಗೆ (ಭಾ.ಕಾ.) ವಿಡಿಯೊ ಕಾನ್ಫರೆನ್ಸ್ (VC) / ಇತರ ಶ್ರವಣ ದೃಶ್ಯ ಮಾಧ್ಯಮಗಳ (OAVM) ಮೂಲಕ ಕಂಪನಿಗಳ ಅಧಿನಿಯಮ, 2013 ("ಅಧಿನಿಯಮ") ರಲ್ಲಿನ ಅನ್ವಯವಾಗುವ ನಿಬಂಧನೆಗಳನ್ನು, ಕಾರ್ಪೊರೇಟ್ ಸಚಿವಾಲಯವು ಹೊರಡಿಸಿರುವ ಮೇ 5, 2020 ಸುತ್ತೋಲೆಯನ್ನು ಏಪ್ರಿಲ್ 08, 2020, ಏಪ್ರಿಲ್ 13, 2020, ಜನವರಿ 13, 2021, ಡಿಸೆಂಬರ್ 14, 2021, ಮೇ 05 2022 ಮತ್ತು ಡಿಸೆಂಬರ್ 28, 2022 ದಿನಾಂಕದ ಸುತ್ತೋಲೆ(ಗಳ) ("ಎಂಸಿಎ ಸುತ್ತೋಲೆಗಳು") ಮತ್ತು ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ('SEBI') ಹೊರಡಿಸಿರುವ ಮೇ 12, 2020ರ ಜನವರಿ 15, 2021ರ ಮತ್ತು ಮೇ 13, 2022 ದಿನಾಂಕದ ಸುತ್ತೋಲೆಗಳ ಜೊತೆ ಓದಿ ಅರ್ಥೈಸಿಕೊಂಡ ಪ್ರಕಾರ ನಡೆಸಲಾಗುವುದು ಎಂದು ಈ ಸೂಚನೆಯನ್ನು ನೀಡಲಾಗಿದೆ.

ಕಂಪನಿಯ ರಿಜಿಸ್ಟ್ರಾರ್ ಮತ್ತು ಶೇರು ವರ್ಗಾವಣೆ ಏಜೆಂಟರು/ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರುವ ಸದಸ್ಯರಿಗೆಲ್ಲ ಸದರಿ ಅಧಿನಿಯಮ ಹಾಗೂ ಅದರ ಅಡಿಯಲ್ಲಿ ರಚಿಸಲಾಗಿರುವ ನಿಯಮಾವಳಿ ಮತ್ತು ಮೇಲೆ ಹೇಳಿರುವ ಸುತ್ತೋಲೆಗಳ ಅನುಸಾರ 'ಎಜಿಎಂ'ನ ಸೂಚನೆಯ ಮತ್ತು 2022–23 ಸಾಲಿನ ವಾರ್ಷಿಕ ವರದಿಯ ವಿದ್ಯುನ್ಮಾನ ಪ್ರತಿಗಳನ್ನು ಇಮೇಲ್ ಮೂಲಕ ಕಳುಹಿಸಲಾಗುವುದು. 2022–23 ವಿತ್ತೀಯ ವರ್ಷದ ವಾರ್ಷಿಕ ವರದಿಯ ಜೊತೆಗೆ ಎಜಿಎಂ ಸೂಚನೆಯನ್ನು ಕೂಡ ಕಂಪನಿಯ www.astrazeneca.com/india, ಸ್ಟಾಕ್ ಎಕ್ಸ್‌ಚೇಂಜುಗಳ www.nseindia.com/www.bseindia.com ವೆಬ್‌ಸೈಟುಗಳಲ್ಲಿ ಮತ್ತು ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್(NSDL)ನ https://www.evoting.nsdl.com ವೆಬ್‌ಸೈಟಿನಲ್ಲಿ ಕೂಡ ಹಾಕಲಾಗುವುದು.

**ಸದಸ್ಯರು ದಯವಿಟ್ಟು ಈ ಕೆಳಗಿನ ಅಂಶಗಳನ್ನು ಗಮನಿಸಬೇಕು:**

ಎ) ವಿದ್ಯುನ್ಮಾನ ಮತಚಲಾವಣೆ ವ್ಯವಸ್ಥೆಯನ್ನು (ಇ-ಮತದಾನ) ಬಳಸಿಕೊಂಡು ಎಜಿಎಂ ಸೂಚನೆಯಲ್ಲಿ ಹೇಳಿರುವಂತಹ ಎಲ್ಲ ನಿರ್ಣಯಗಳ ಮೇಲೆ ತಮ್ಮ ಮತ ಚಲಾಯಿಸಲು ಅನುವಾಗುವಂತೆ ಸದಸ್ಯರಿಗೆ ಎನ್‌ಎಸ್‌ಡಿಎಲ್‌ನ ಇ-ಮತದಾನ ಸೌಲಭ್ಯವನ್ನು ಒದಗಿಸಲಾಗುವುದು. ವಿದ್ಯುನ್ಮಾನ ಮತ್ತು ಭೌತಿಕ ರೂಪದಲ್ಲಿ ಶೇರುಗಳನ್ನು ಹೊಂದಿರುವ ಸದಸ್ಯರಿಂದ "ರಿಮೋಟ್" ಮತ ಚಲಾವಣೆ, ಮತ್ತು ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರದ ಸದಸ್ಯರಿಂದ ಮತ ಚಲಾವಣೆ ಮಾಡುವ ವಿಧಾನಗಳ ಕುರಿತಾದ ವಿವರಗಳನ್ನು ಎಜಿಎಂ ಸೂಚನೆಯಲ್ಲಿ ತಿಳಿಸಲಾಗುವುದು.

ಬಿ) ಇ-ಮತದಾನದ ಅವಧಿಯು ಆಗಸ್ಟ್ 10, 2023 ಬೆಳಿಗ್ಗೆ 09.00ಕ್ಕೆ (ಭಾ.ಕಾ.) ಪ್ರಾರಂಭವಾಗಿ ಆಗಸ್ಟ್ 13, 2023 ಸಂಜೆ 05.00ಕ್ಕೆ (ಭಾ.ಕಾ.) ಮುಗಿಯುತ್ತದೆ. ಸದಸ್ಯರು ಈ ಅವಧಿಯಲ್ಲಿ ವಿದ್ಯುನ್ಮಾನ ರೂಪದಲ್ಲಿ ತಮ್ಮ ಮತಗಳನ್ನು ಚಲಾಯಿಸಬಹುದು. ತದನಂತರ ಎನ್‌ಎಸ್‌ಡಿಎಲ್, ಇ-ಮತದಾನದ ಮಾಡ್ಯೂಲನ್ನು ತೆಗೆದುಬಿಡುತ್ತದೆ. ಸದಸ್ಯರ ಮತದಾನದ ಹಕ್ಕುಗಳು ಅವರು ಆಗಸ್ಟ್ 07, 2023ರಂದು ('ಅಂತಿಮ ದಿನಾಂಕ') ಕಂಪನಿಯಲ್ಲಿ ಹೊಂದಿರುವ ಪಾವತಿಸಿದ ಇಕ್ವಿಟಿ ಶೇರು ಬಂಡವಾಳದ ಪ್ರಮಾಣಗಳಿಗೆ ಅನುಗುಣವಾಗಿರುತ್ತದೆ. ಕಂಪನಿಯ ಸದಸ್ಯರಾಗಿರುವ, ಸದರಿ ಅಂತಿಮ ದಿನಾಂಕದಂದು ಡೀಮ್ಯಾಟ್ ರೂಪದಲ್ಲಿ ಅಥವಾ ಭೌತಿಕ ರೂಪದಲ್ಲಿ ಶೇರುಗಳನ್ನು ಹೊಂದಿರುವ ಯಾವುದೇ ವ್ಯಕ್ತಿಯು ಸಾಮಾನ್ಯ ಸಭೆಯ ಸಂದರ್ಭದಲ್ಲಿ ರಿಮೋಟ್ ಇ-ಮತದಾನ ಮಾಡ್ಯೂಲನ್ನು ಮಾತ್ರವಲ್ಲ, ಮತದಾನ ಸೌಲಭ್ಯವನ್ನು ಬಳಸಿಕೊಂಡು ಎಜಿಎಂ ಸೂಚನೆಯಲ್ಲಿ ಹೇಳಿರುವಂತಹ ಎಲ್ಲ ನಿರ್ಣಯಗಳ ಮೇಲೆ ಮತಗಳನ್ನು ಚಲಾಯಿಸಬಹುದು.

ಸಿ) VC / OAVM ಸೌಲಭ್ಯದ ಮೂಲಕ "ಎಜಿಎಂ"ನಲ್ಲಿ ಹಾಜರಿರುವ, ಮತ್ತು ರಿಮೋಟ್ ಇ-ಮತದಾನದ ಮೂಲಕ ನಿರ್ಣಯಗಳ ಮೇಲೆ ಈಗಾಗಲೇ ತಮ್ಮ ಮತವನ್ನು ಚಲಾಯಿಸದಿರುವ, ಮತ್ತು ಹಾಗೆ ಮತ ಚಲಾಯಿಸಲು ಯಾವುದೇ ವಿಧವಾದ ನಿರ್ಬಂಧಗಳಿಗೆ ಒಳಗಾಗಿಲ್ಲದ ಶೇರುದಾರರು ಎಜಿಎಂ ನಡೆಯುವ ಸಮಯದಲ್ಲಿ ರಿಮೋಟ್ ಇ-ಮತದಾನ ವ್ಯವಸ್ಥೆಯ ಮೂಲಕ ತಮ್ಮ ಮತವನ್ನು ಚಲಾಯಿಸಲು ಅರ್ಹರಾಗಿರುತ್ತಾರೆ.

ಡಿ) ಎಜಿಎಂ ಪೂರ್ವದಲ್ಲಿಯೇ ಯಾರು ತಮ್ಮ ಮತಗಳನ್ನು ರಿಮೋಟ್ ಇ-ಮತದಾನ ವ್ಯವಸ್ಥೆಯ ಮೂಲಕ ಚಲಾಯಿಸಿರುತ್ತಾರೋ ಅಂತಹವರು ಕೂಡ VC / OAVM ಸೌಲಭ್ಯದ ಮೂಲಕ "ಎಜಿಎಂ"ನಲ್ಲಿ ಹಾಜರಿರಬಹುದಾದರೂ/ಪಾಲ್ಗೊಳ್ಳಬಹುದಾದರೂ ಮತ್ತೊಮ್ಮೆ ಮತಗಳನ್ನು ಚಲಾಯಿಸಲು ಅವರಿಗೆ ಹಕ್ಕಿರುವುದಿಲ್ಲ.

ತಮ್ಮ ಇಮೇಲ್‌ಗಳನ್ನು ನೋಂದಾಯಿಸಿಕೊಂಡಿರದ ಆದರೆ ಮೊಬೈಲ್ ಸಂಖ್ಯೆಗಳು ಲಭ್ಯವಿರುವ ಸದಸ್ಯರು ಸೂಚನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಲು ಸಾಧ್ಯವಾಗುವಂತೆ, ಇಂಟೆಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, ಎಸ್ಸೆಮ್ಮೆಸ್ ಮೂಲಕ ಒಂದು ವೆಬ್ ಲಿಂಕ್ ಕಳುಹಿಸುತ್ತದೆ. ಈ ವಿಷಯದ ಬಗ್ಗೆ ಇನ್ಯಾವುದೇ ಬಗೆಯ ಸಂದೇಶವು ದೊರೆತಿಲ್ಲದ, ಆದರೆ ಪ್ರಸ್ತಾವಿತ ರಿಮೋಟ್ ಇ-ಮತದಾನದಲ್ಲಿ ಪಾಲ್ಗೊಳ್ಳಲು ಉದ್ದೇಶಿಸಿರುವ, ನಮ್ಮ ಸದಸ್ಯರೆಲ್ಲರಿಗೂ ಈ ಸೂಚನೆಯು ತಲುಪಲಿ ಎಂದು ನಾವು ಮಾಡುತ್ತಿರುವ ಪ್ರಯತ್ನ ಇದು, ಎಂದು ಸದಸ್ಯರೆಲ್ಲರೂ ಪರಿಗಣಿಸಬೇಕಾಗಿ ವಿನಂತಿಸಿಕೊಳ್ಳುತ್ತಿದ್ದೇವೆ.

ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರದ ಕಾರಣವಾಗಿ ಸದರಿ ಸೂಚನೆಯನ್ನು ಸ್ವೀಕರಿಸಲು ಸಾಧ್ಯವಾಗಿರದ ಸದಸ್ಯರು https://www.integratedindia.in/emailupdation.aspx ಲಿಂಕ್ ಮೇಲೆ ಕ್ಲಿಕ್ಕಿಸಿ ಅದರಲ್ಲಿ ಹೇಳುವಂತಹ ನೋಂದಾವಣೆ ಪ್ರಕ್ರಿಯೆಯನ್ನು ಅನುಸರಿಸುವ ಮೂಲಕ RTAನೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಳ್ಳಬಹುದು. ಇಮೇಲ್ ವಿಳಾಸದ ನೋಂದಾವಣೆ ಯಶಸ್ವಿಯಾದ ಬಳಿಕ ಈ ಸೂಚನೆಯ ಮೇಲೆ ರಿಮೋಟ್ ಇ-ಮತದಾನ ಮಾಡಲು ಸಾಧ್ಯವಾಗುವಂತೆ ಸದಸ್ಯರಿಗೆ ಸದರಿ ಸೂಚನೆಯ ಸಾಫ್ಟ್ ಪ್ರತಿ ಮತ್ತು ರಿಮೋಟ್ ಇ-ಮತದಾನದ ವಿಧಾನ ಜೊತೆಗೆ ಯೂಸರ್ ಐಡಿ ಹಾಗೂ ಪಾಸ್‌ವರ್ಡ್‌ಗಳು ದೊರೆಯುತ್ತವೆ. ಏನಾದರೂ ಸಂದೇಹಗಳಿದ್ದರೆ ಈ ವಿಳಾಸಕ್ಕೆ ಬರೆದು ಪರಿಹರಿಸಿಕೊಳ್ಳಬಹುದು:- giri@integratedindia.in ಅಥವಾ ಮತದಾನದ ಅವಧಿ ಕೊನೆಯಾಗುವುದಕ್ಕೆ ಇನ್ನೂ 48 ತಾಸುಗಳಿರುವವರೆಗೆ ಇಲ್ಲಿ ಕೆಳಗೆ ಹೇಳಿರುವ ಕಂಪನಿಯ ಇಮೇಲ್ ವಿಳಾಸಕ್ಕೆ ಅಥವಾ RTAಗೆ ಕೋರಿಕೆ/ಸಂದೇಶವನ್ನು ಕಳುಹಿಸಬಹುದು; ಅದರಲ್ಲಿ ಫೋಲಿಯೊ ಸಂಖ್ಯೆ / ಡೀಮ್ಯಾಟ್ ಖಾತೆ ಸಂಖ್ಯೆಯನ್ನು ಉದ್ಧರಿಸಬೇಕು. ಕಂಪನಿಯ ಇಮೇಲ್ ವಿಳಾಸ ಮತ್ತು ಸಂಪರ್ಕ ವಿವರಗಳು: comp.secy@astrazeneca.com/080 67748000. RTA ಇಮೇಲ್ ವಿಳಾಸ ಮತ್ತು ಸಂಪರ್ಕ ವಿವರಗಳು: giri@integratedindia.in / 080 23460815-18.

ಇಲೆಕ್ಟ್ರಾನಿಕ್ ರೂಪದಲ್ಲಿ ಶೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇಮೇಲ್ ವಿಳಾಸವನ್ನು ಡಿಪಾಸಿಟರೀಸ್/ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೂ, ಭೌತಿಕ ರೂಪದಲ್ಲಿ ಶೇರುಗಳನ್ನು ಹೊಂದಿರುವವರು RTAನೊಂದಿಗೂ ನೋಂದಾಯಿಸಿ ಕೊಳ್ಳಬೇಕಾಗಿ ಕೋರುತ್ತೇವೆ.

ಯಾವುದೇ ವ್ಯಕ್ತಿಯು ಸದರಿ ಸೂಚನೆಯನ್ನು ರವಾನಿಸಿದ ನಂತರದಲ್ಲಿ ಕಂಪನಿಯ ಶೇರುಗಳನ್ನು ಹೊಂದುವ ಮೂಲಕ ಕಂಪನಿಯ ಸದಸ್ಯರಾಗಿ, ಕೊನೆಯ ದಿನಾಂಕವಾದ ಆಗಸ್ಟ್ 7, 2023ರಂದು ಶೇರುಗಳನ್ನು ಹೊಂದಿದ್ದರೆ, ಅಂತಹವರು evoting@nsdl.co.in or giri@integratedindia.in ಗೆ ಮನವಿಯನ್ನು ಕಳುಹಿಸಿ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಗಳನ್ನು ಪಡೆದುಕೊಳ್ಳಬಹುದು. ಆದರೆ, ಈಗಾಗಲೇ "ಎನ್‌ಎಸ್‌ಡಿಎಲ್"ನೊಂದಿಗೆ ರಿಮೋಟ್ ಇ-ಮತದಾನಕ್ಕಾಗಿ ನೋಂದಾಯಿಸಿಕೊಂಡಿದ್ದರೆ ಅಂತಹ ಸದಸ್ಯರು ಈಗಿರುವ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಗಳನ್ನು ಬಳಸಿಕೊಂಡೇ ತಮ್ಮ ಮತಗಳನ್ನು ಚಲಾಯಿಸಬಹುದು.

ಅಂಚೆ ಮತದಾನ ಪ್ರಕ್ರಿಯೆಯು ನ್ಯಾಯವಾಗಿ ಮತ್ತು ಪಾರದರ್ಶಕವಾಗಿ ನಡೆಯಬೇಕೆಂದು ಕಂಪನಿಯ ನಿರ್ದೇಶಕರ ಮಂಡಳಿಯು ಶ್ರೀ ವಿಜಯಕೃಷ್ಣ ಕೆ.ಟಿ., ವೃತ್ತಿಪರ ಕಂಪನಿ ಸೆಕ್ರೆಟರಿ, ಬೆಂಗಳೂರು, ಸಿ.ಪಿ. ಸಂ. 980, ಸದಸ್ಯತ್ವ ಸಂಖ್ಯೆ FCS:1788, ಇವರನ್ನು ಅಂಚೆ ಮತದಾನ ಪ್ರಕ್ರಿಯೆಯ ಸೂಕ್ಷ್ಮ ಪರಿಶೀಲಕರೆಂದು ನೇಮಕ ಮಾಡಿದೆ.

ಸಭೆಯಲ್ಲಿ ಹಾಜರಿದ್ದು ಮತ ಚಲಾಯಿಸುವ ಹಕ್ಕಿರುವ ವ್ಯಕ್ತಿಗಳು ಖುದ್ದಾಗಿ/ಅಧಿಕೃತ ಪ್ರತಿನಿಧಿಯ ಮೂಲಕ ಮತ ಚಲಾಯಿಸಬಹುದು, ಆದರೆ ಸಭೆಯಲ್ಲಿ ಹಾಜರಿರಲು ಮತ್ತು ಮತಚಲಾಯಿಸಲು ಅಧಿಕಾರವಿರುವ ವ್ಯಕ್ತಿಯು ಮೊದಲೇ, ವಿಧ್ಯುಕ್ತವಾಗಿ ಸಹಿಮಾಡಿರುವ ಎಲ್ಲ ನಿಗದಿತ ನಮೂನೆ/ಅಧಿಕಾರ ಪತ್ರಗಳನ್ನು ಸೂಕ್ಷ್ಮ ಪರಿಶೀಲಕರ vijaykt@vjkt.in ಇಮೇಲ್ ವಿಳಾಸಕ್ಕೆ ಕಳುಹಿಸಿ ಅದರ ಪ್ರತಿಯೊಂದನ್ನು evoting@nsdl.co.inಗೆ ಕಳುಹಿಸಬೇಕು.

ಇಲೆಕ್ಟ್ರಾನಿಕ್ ವೋಟಿಂಗ್‌ಗೆ ಸಂಬಂಧಿಸಿದಂತೆ ಏನಾದರೂ ಪ್ರಶ್ನೆಗಳಿದ್ದರೆ: www.evoting.nsdl.com ನ ಡೌನ್‌ಲೋಡ್ ವಿಭಾಗಗಳಲ್ಲಿರುವ 'ಸಾಮಾನ್ಯವಾಗಿ ಕೇಳುತ್ತಿರುವ ಪ್ರಶ್ನೆಗಳು (FAQs)' ಮತ್ತು "ಶೇರುದಾರರಿಗಾಗಿ ಇ-ವೋಟಿಂಗ್ ಬಳಕೆದಾರರ ಕೈಪಿಡಿ" ಗಳನ್ನು ಪರಾಮರ್ಶಿಸಬಹುದು ಅಥವಾ NSDL ಶುಲ್ಕರಹಿತ ಸಂಖ್ಯೆ 022-4886 7000 ಮತ್ತು 022-2488 7000 ಕ್ಕೆ ಕರೆಮಾಡಬಹುದು ಅಥವಾ evoting@nsdl.co.in ಗೆ ಮನವಿಯನ್ನು ಕಳುಹಿಸಬಹುದು. ವಿದ್ಯುನ್ಮಾನ ವಿಧಾನದಲ್ಲಿ ಮತದಾನ ಮಾಡುವ ಸೌಲಭ್ಯಕ್ಕೆ ಸಂಬಂಧಿಸಿದ ಯಾವುದೇ ಕುಂದುಕೊರತೆಗಳಿದ್ದಲ್ಲಿ, ಅದನ್ನು ಶ್ರೀ ಸೋನಿ ಸಿಂಗ್, ಸಹಾಯಕ ವ್ಯವಸ್ಥಾಪಕರು ಮತ್ತು ಶ್ರೀಮತಿ ಸರಿತಾ ಮೋಟೆ, ಸಹಾಯಕ ವ್ಯವಸ್ಥಾಪಕರು, ಎನ್‌ಎಸ್‌ಡಿಎಲ್, 4 ನೇ ಮಹಡಿ, "ಎ" ವಿಂಗ್, ಟ್ರೇಡ್ ವರ್ಲ್ಡ್, ಕಮಲಾ ಮಿಲ್ಸ್ ಕಾಂಪೌಂಡ್, ಸೇನಾಪತಿ ಬಾಪಟ್ ಮಾರ್ಗ, ಲೋವರ್ ಪರೇಲ್, ಮುಂಬೈ – 400 013 @1800-1020-990/1800-224-430 / evoting @nsdl.co.in ಇವರಿಗೆ ತಿಳಿಸಬಹುದು ಅಥವಾ ಕಂಪನಿಯ comp.secy@astrazeneca.com ವಿಳಾಸಕ್ಕೆ ಬರೆಯಿರಿ.

2022–23ನೇ ಆರ್ಥಿಕ ವರ್ಷಕ್ಕೆ ಅಂತಿಮ ಡಿವಿಡೆಂಡಿಗೆ ಸದಸ್ಯರ ಅರ್ಹತೆಯನ್ನು ಗುರುತಿಸಲು ಶುಕ್ರವಾರ, 14ನೇ ಜುಲೈ, 2023 ದಾಖಲೆ ದಿನಾಂಕವಾಗಿತ್ತು, 44ನೇ ಎಜಿಎಮ್‌ನಲ್ಲಿ ಸದಸ್ಯರ ಒಪ್ಪಿಗೆಗೆ ಒಳಪಟ್ಟು, ಸದರಿ ಡಿವಿಡೆಂಡನ್ನು ನಿಗದಿತ ಸಮಯದಲ್ಲಿ ಪಾವತಿಸಲಾಗುವುದು. ಸದಸ್ಯರು ಗಮನಿಸಬಹುದು, ಏನೆಂದರೆ: ಆದಾಯ ತೆರಿಗೆ ಕಾಯ್ದೆ, 1961ರ ಅನುಸಾರ, ಡಿವಿಡೆಂಡ್ ಆದಾಯವು ಸದಸ್ಯರ ಕೈಯಲ್ಲಿ ತೆರಿಗೆಗೆ ಒಳಪಡುತ್ತದೆ, ಮತ್ತು ಆದಾಯ ತೆರಿಗೆ ಕಾಯ್ದೆ, 1961ರಲ್ಲಿ ನಿರ್ದಿಷ್ಟ ಪಡಿಸಿದ ದರಗಳ ಪ್ರಕಾರ ಸದಸ್ಯರಿಗೆ ಪಾವತಿಸುವ ಡಿವಿಡೆಂಡಿನಿಂದ ಕಂಪನಿಯು ಮೂಲದಲ್ಲೇ ತೆರಿಗೆಯನ್ನು ಕಡಿತ (ಟಿಡಿಎಸ್) ಮಾಡಬೇಕಾಗಿರುತ್ತದೆ. ಆದಾಯ ತೆರಿಗೆ ಕಾಯ್ದೆ, 1961ರ ಪ್ರಕಾರ ನಿಗದಿಪಡಿಸಿದ ದಾಖಲೆಗಳನ್ನು https://www.integratedindia.in/ExemptionFormSubmission.aspx ನಲ್ಲಿ ಸಲ್ಲಿಸಲು ಸದಸ್ಯರಲ್ಲಿ ಕೋರಲಾಗಿದೆ. ಈ ವಿಚಾರದಲ್ಲಿ ಜುಲೈ 17, 2023ನೇ ದಿನಾಂಕದ ಕಂಪನಿಯ ಈಮೇಲ್ ಸಂವಹನವನ್ನು ದಯವಿಟ್ಟು ಗಮನಿಸಿ; ಅದನ್ನು www.nseindia.com ಹಾಗೂ www.bseindia.com ನಲ್ಲೂ ಅಪ್‌ಲೋಡ್ ಮಾಡಲಾಗಿದೆ.

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್‌ಗಾಗಿ

ಸ್ಥಳ: ಬೆಂಗಳೂರು | ಮಾನಸ. ಆರ್
ದಿನಾಂಕ: ಜುಲೈ 20, 2023 | ಕಂಪನಿ ಸೆಕ್ರೆಟರಿ